<u>ಸಾಕ್ಷಿಯನ್ನು ದಿನಾಂಕಃ-02.07.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀಸವಾಲುಃ ಶ್ರೀ ಹೆಚ್.ಎಸ್.ಸಿ ವಕೀಲರಿಂದ</u>

1. ನನಗೆ ಈಶ್ವರ ರವರ ಪರಿಚಯ ಇದೆಯಾ ಎಂದರೆ ಸಾಕ್ಷಿಯು ಮುಖ ಪರಿಚಯ ಮಾತ್ರ ಇರುತ್ತದೆ ಎಂದಿರುತ್ತಾರೆ. ನಾನು ಗುತ್ತಿಗೆ ಕೆಲಸ ಮಾಡುತ್ತೇನೆ. ನನ್ನ ಕೆಳಗೆ 10 ಜನ ಕೆಲಸ ಮಾಡುತ್ತಾರೆ. ದಿಃ23-12-2015 ರಲ್ಲಿ ನನ್ನ ಹತ್ತಿರ ಕೆಲಸ ಮಾಡುವ ಜನರನ್ನು ನೋಡಲು ಹೋಗಿದ್ದೆ. ಸರೋಜ ರವರ ಪರಿಚಯ ನನಗೆ 15-20 ವರ್ಷಗಳಿಂದ ಇರುತ್ತೆ. ಅದೇ ರಸ್ತೆಯಲ್ಲಿ ನಮ್ಮ ಮನೆಗೆ ಹೋಗುತ್ತಿದ್ದೇವು ಆದ ಕಾರಣ ಪರಿಚಯ ಇರುತ್ತಾರೆ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ. ನಾನ ಸಹಿ ಮಾಡಿದ ದಾಖಲೆ ಯಾರು ಎಲ್ಲಿ ತಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ 12 ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಅರುಣ್ ವಕೀಲರು ನನಗೆ ಓದಿ ಹೇಳಿರುತ್ತಾರೆ ಎಂದಿರುತ್ತಾರೆ.

2. ನಿಡಿ 12 ಮರಣದ ಶಾಸನ ಪತ್ರದಲ್ಲಿ ಯಾವ ಆಸ್ತಿಯ ವಿಚಾರವಾಗಿ ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ದಿಃ23-12-2015 ರಂದು ನನಗೆ ಸರೋಜಮ್ಮ ರವರು ಸಹಿ ಮಾಡಲು ಕರೆದಿರುತ್ತಾರೆ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಆ ವಿಚಾರವನ್ನು ಹೇಳಿಲ್ಲ ಎಂದರೆ ಸರಿಯಲ್ಲ. ಸರೋಜಮ್ಮ ರವರ ಆರೋಗ್ಯ ಸ್ಥಿತಿ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ಈಶ್ವರ ಮತ್ತು ಗಿರೀಶ್ ವಕೀಲರು ಪರಿಚಯ ಇದ್ದಾರೆ ಎಂದರೆ ಸಾಕ್ಷಿಯು ಈಶ್ವರ ರವರು ಮುಖ ಪರಿಚಯ ಇರುತ್ತಾರೆ, ಗಿರೀಶ್ ವಕೀಲರು ಪರಿಚಯ ಇರುತ್ತಾರೆ. ನಿಡಿ 12ಕೆ ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಷರತ್, ಅರುಣ್ ವಕೀಲರು ಹಾಜರಿದ್ದರು.

3. ನನಗೆ ಷರತ್ ರವರ ಪರಿಚಯವಿಲ್ಲ. ಷರತ್ ರವರನ್ನು ನಾನೇ ಪರಿಚಯ ಮಾಡಿಕೊಂಡಿರುತ್ತೇನೆ. ನಿಡಿ 12ಕ್ಕೆ ಸಹಿ ಮಾಡುವ ಮುಂಚೆ ನಾನು ಕೇಳಿರುತ್ತೇನೆ ಅರುಣ್ ವಕೀಲರು ನನಗೆ ಓದಿ ಹೇಳಿರುತ್ತಾರೆ. ಸರೋಜಮ್ಮ ರವರು ವಿಲ್ ಗೆ ಸಹಿ ಮಾಡಲು ನನ್ನನ್ನು ಕರೆದಿರುತ್ತಾರೆ. ನಾನು ಈಶ್ವರ ರವರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಬೇರೆ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರೋಜಮ್ಮ ರವರು ವಿಲ್ ಬರೆಯುವ ಮುಂಚೆಯಿಂದ ಅನಾರೋಗ್ಯದಿಂದ ಇದ್ದರು ಎಂದರೆ ಸರಿಯಲ್ಲ. ವಿಚಾರ ನನಗೆ ಗೊತ್ತಿಲ್ಲದಿದ್ದರೂ ಈಶ್ವರ ರವರಿಗೆ ಸಹಾಯ ಮಾಡಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ

ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

ಸಹಿ/-

ಪ್ರ. ಸಿ.ಜೆ ಮತ್ತು ಜೆಎಂ.ಎಫ್ ಸಿ

ಸೋಮವಾರಪೇಟೆ